ಮಾಜಿ ಶ್ಯಾನುಭೋಗರು ಮತ್ತು ಮಾಜಿ ಪಟೇಲರಿಗೆ ಅಡ್‌ಹಾಕ್ ಭತ್ಯೆ ಹೆಚ್ಚಿಸುವ ಬೇಡಿಕೆ ಕುರಿತು

1761 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಜಿ ಗ್ರಾಮಾಧಿಕಾರಿಗಳಿಗೆ ಹಿಂದಿನ ಶ್ಯಾನುಭೋಗರು ಮತ್ತು ಪಟೇಲರುಗಳಿಗೆ ಈ ಸರ್ಕಾರದಿಂದ ಕೊಡಲಾಗುತ್ತಿರುವ ಅಡ್ ಹಾಕ್ ಪಿಂಚಣಿ ಹಣ ರೂ.500-00 ಮಾತ್ರ ಕೊಡುತ್ತಿದ್ದು, ಪಿಂಚಣಿ ಹಣವನ್ನು ಜಾಸ್ತಿ ಮಾಡುವಂತೆ ಸದರಿಯವರು ಬೇಡಿಕೆ ಇಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಸದರಿ ಪಿಂಚಣಿ ಹಣ ಜಾಸ್ತಿ ಮಾಡಲು ಸರ್ಕಾರವು ಉದ್ದೇಶಿಸಿದೆಯೇ?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಪರಿಶೀಲಿಸಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಬಿಡುಗಡೆಯಾದ ಹಣ

1764 - ಡಾ॥ ಎಂ.ಪಿ. ಕರ್ಕಿ (ಕುಮಟ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಕುಮಟಾ ವಿಧಾನಸಭಾ ಕ್ಷೇತ್ರಕ್ಕೆ 1997-98, 1998-99 ಮತ್ತು 1999-2000ಕ್ಕೆ ಮಂಜೂರಾದ ಹಣವೆಷ್ಟು?*

ಆ) *ಉಳಿದ ವಿಧಾನಸಭಾ ಕ್ಷೇತ್ರಗಳಿಗೆ ಮಂಜೂರಾದ ಹಣವೆಷ್ಟು? (ವಿವರ ನೀಡುವುದು)*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) *(ಲಕ್ಷ ರೂ.ಗಳಲ್ಲಿ)*

ವರ್ಷ	*ನಿಗಧಿಪಡಿಸಿದ ಹಣ*
1997-98	6.75
1998-99	- (ನಿಗಧಿಪಡಿಸಿರುವುದಿಲ್ಲ)
1999-2000	1.50

ಅ)

ಕ್ರ. ಸಂ.	ಕ್ಷೇತ್ರದ ಹೆಸರು	1997-98		1998-99		1999-2000	
		ಪಿಬಿಎ	ವಸತಿ	ಎನ್‌ಎಸ್‌ಡಿಪಿ	ಪಿಬಿಎ	ಪಿಬಿಎ	ವಸತಿ
1.	ಕಾರವಾರ	1.00	12.40	6.75	1.50	-	-
2.	ಹೊನ್ನಾವರ	-	-	-	-	1.00	-
3.	ಸಿರ್ಸಿ	2.50	-	-	1.20	3.50	-
4.	ಮುಂಡಗೋಡ	2.50	-	6.75	2.50	4.00	30.00
5.	ದಾಂಡೇಲಿ	2.10	-	6.75	4.25	3.00	-
6.	ಯಲ್ಲಾಪುರ	2.50	-	-	-	-	-
7.	ಹಳಿಯಾಳ	2.50	-	-	2.00	3.50	-
8.	ಭಟ್ಕಳ	-	-	6.75	1.50	2.50	-
9.	ಅಂಕೋಲ	-	-	6.75	-	1.50	-
10.	ಸಿದ್ದಾಪುರ	-	-	6.75	-	-	-
	ಒಟ್ಟು	**13.10**	**12.40**	**40.50**	**12.95**	**19.00**	**30.00**

ರಾಜ್ಯದ ಪ್ರತಿಯೊಂದು ಹಳ್ಳಿಗಳಲ್ಲಿರತಕ್ಕ ಗ್ರಾಮಲೆಕ್ಕಾಧಿಕಾರಿಗಳ ಕೊರತೆ ಬಗ್ಗೆ

1765 - ಶ್ರೀ ಜಗದೀಶ್ ತಿಮ್ಮಣ್ಣಗೌಡ ಪಾಟೀಲ್ (ಬೀಳಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ರಾಜ್ಯದ ಪ್ರತಿಯೊಂದು ಹಳ್ಳಿಗಳಿಗೂ ಗ್ರಾಮಲೆಕ್ಕಿಗರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಹಾಗಿದ್ದಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಕೆಲವು ಗ್ರಾಮಗಳಲ್ಲಿ ಮಾತ್ರ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುತ್ತವೆ.

ಆ) ಹೆಚ್ಚಿನ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಕೆಲವನ್ನು ಸಕ್ರಮಗೊಂಡ ದಿನಗೂಲಿ ನೌಕರರಿಂದ ಭರ್ತಿ ಮಾಡಲಾಗುತ್ತಿದೆ.